ಜಗದ್ರೂಪವಾದನೆಂದೂ ಹೇಳುತ್ತಾರೆ. ಮತ್ತಿತರ ಸಂದರ್ಭಗಳಲ್ಲಿ ಜಗತ್ತಿನ ಸತ್ಯತ್ವದ ಪ್ರಶ್ನೆಯನ್ನು ವಿಚಾರ ಮಾಡುವಾಗ ಅದ್ವೈತಿಯ ಪಾತ್ರವನ್ನು ವಹಿಸಿಕೊಳ್ಳುತ್ತಾರೆ. ಇವೆಲ್ಲವೂ ಅವರ ಚಿಂತನೆಗಳನ್ನು ಪ್ರಸಿದ್ಧವಾಗಿರುವ ತಾತ್ತ್ವಿಕ ಸಿದ್ಧಾಂತಗಳ ಜೊತೆ ಸಮೀಕರಿಸುವುದನ್ನು ಕಷ್ಟದಾಯಕವನ್ನಾಗಿ ಮಾಡುತ್ತವೆ. ಸತ್ಯತತ್ತ್ವದ ಸಮಸ್ಯೆಯ ಬಗ್ಗೆ ಸ್ವಾಮೀಜಿಯವರ ನಿಲುವು ಸಾಪೇಕ್ಷವಾದದ್ದು. ಇದನ್ನು ಅವರು ತಮ್ಮ ಒಂದು ಪ್ರಸಿದ್ಧ ಹೇಳಿಕೆಯಲ್ಲಿ ಹೀಗೆ ವ್ಯಕ್ತಪಡಿಸುತ್ತಾರೆ: "ಮಾನವನು ತಪ್ಪಿನಿಂದ ಸತ್ಯದೆಡೆಗೆ ಸಾಗುತ್ತಿಲ್ಲ. ಅದಕ್ಕೆ ಬದಲಾಗಿ ಸತ್ಯದಿಂದ ಸತ್ಯದೆಡೆಗೆ, ಕೆಳಗಿನ ಸತ್ಯದಿಂದ ಮೇಲಿನ ಸತ್ಯದೆಡೆಗೆ ಸಾಗುತ್ತಿದ್ದಾನೆ."

೫. ಭಗವದನುಗ್ರಹವೆನ್ನುವುದು ಪರಮಾತ್ಮನ ವಿಮೋಚನಾ ಶಕ್ತಿಯೇ ಆಗಿದೆ. ಇದು ದೇವತಾರೂಪಗಳು, ಅವತಾರಗಳು ಮತ್ತು ಸಿದ್ಧಪುರುಷರು ತಮ್ಮ ಭಕ್ತರ ಮೇಲೆ ಹರಿಸುವ ಆಶೀರ್ವಾದದಲ್ಲಿ ಯುಕ್ತವಾದ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ. ಪ್ರತಿಯೊಬ್ಬ ಜೀವಿಯೂ ಸುಪ್ತವಾಗಿರುವ ದಿವ್ಯಾತ್ಮನೇ ಆಗಿದ್ದಾನೆ; ಈ ದಿವ್ಯತೆಯನ್ನು ಪ್ರಕಟಮಾಡಿಕೊಳ್ಳುವ ಸಾಮರ್ಥ್ಯವು ಪ್ರತಿಯೊಬ್ಬ ಜೀವಿಯಲ್ಲಿಯೂ ಹುದುಗಿದೆ. ಅನುಗ್ರಹವು ಈ ಶಕ್ತಿಯನ್ನು ಶೀಘ್ರವಾಗಿ ಜಾಗೃತಗೊಳಿಸಲು ಬೇಕಾದ ಪ್ರೇರಕಶಕ್ತಿಯನ್ನು ಒದಗಿಸುತ್ತದೆ.

೬. ಸ್ವಾಮೀಜಿ ಆತ್ಮಾರ್ಪಣೆಗಿಂತಲೂ ಸ್ವಪ್ರಯತ್ನಕ್ಕೆ, ಹಾಗೆಯೇ ಪ್ರಾರ್ಥನೆ, ಆಚರಣೆಗಳಿಗಿಂತಲೂ ಧ್ಯಾನಜಪಗಳಿಗೆ ಹೆಚ್ಚು ಮಹತ್ವವನ್ನು ನೀಡುತ್ತಾರೆ ಎನ್ನಿಸುತ್ತದೆ.

## ಭಕ್ತಿ ಮತ್ತು ಅನುಷ್ಠಾನ ವೇದಾಂತ

ಸ್ವಾಮಿ ವಿವೇಕಾನಂದರ ಜೀವನದ ಕಾರ್ಯನೀತಿ ಕೇವಲ ತಾತ್ತ್ವಿಕ ಸಮಸ್ಯೆಗಳ ಬಗ್ಗೆ ಕೇವಲ ಊಹಿಸುವುದಾಗಿರಲಿಲ್ಲ. ಅವರು ಬದುಕಿನ ಅಸ್ತಿತ್ವದ ಸಮಸ್ಯೆಗಳಿಗೆ (existential problems) ಪರಿಹಾರವನ್ನು ಹುಡುಕುವ ಕಾರ್ಯಕ್ಕೆ ಬದ್ಧರಾಗಿದ್ದರು. ಈ ಪರಿಹಾರವು ಅವರೇ ಹೆಸರಿಟ್ಟ 'ಅನುಷ್ಠಾನ ವೇದಾಂತ' ಎಂಬ ಸ್ವರೂಪವನ್ನು ಪಡೆದುಕೊಂಡಿತು. ಇದು ಮಾನವಜನಾಂಗದ ಪುರೋಭಿವೃದ್ಧಿಗಾಗಿ ಸ್ವಾಮಿ ವಿವೇಕಾನಂದರು ನೀಡಿರುವ ಅತ್ಯಂತ ಮಹತ್ವದ ಕೊಡುಗೆಯಾಗಿದೆ. ಇದರ ತಿರುಳು ವೇದಾಂತದ ಜೀವಸಂಜೀವಿನೀ ತತ್ತ್ವಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡು, ಆ ಮೂಲಕ ಸ್ವಂತ ಮುಕ್ತಿಯನ್ನು ಮತ್ತು ಜಗತ್ತಿನ ಕಲ್ಯಾಣವನ್ನು ಸಾಧಿಸುವುದೇ ಆಗಿದೆ.

ಅನುಷ್ಠಾನ ವೇದಾಂತವು ಮೂರು ಮೂಲಭೂತ ನಿಯಮಗಳ ಮೇಲೆ ಆಧಾರಿತವಾಗಿದೆ. ಇವು ಉಪನಿಷತ್ತುಗಳು, ಭಗವದ್ಗೀತೆ ಮತ್ತಿತರ ಹಿಂದೂ ಶಾಸ್ತ್ರಗಳಲ್ಲಿ ಕಂಡುಬರುತ್ತವೆ, ನಿಜ. ಆದರೆ ವ್ಯಷ್ಟಿಪ್ರಶ್ನೆ ಮತ್ತು ಸಮಷ್ಟಿಪ್ರಶ್ನೆಗಳ ಪರಿವರ್ತನೆಯಲ್ಲಿ ಇವುಗಳ ಪ್ರಾಯೋಗಿಕ ಮಹತ್ವವನ್ನು ಗುರುತಿಸಿದವರೆಂದರೆ ಸ್ವಾಮಿ ವಿವೇಕಾನಂದರು ಮಾತ್ರ. ಕೆಲವೇ ಕೆಲವು ತತ್ತ್ವಶಾಸ್ತ್ರಜ್ಞರು ಮತ್ತು ಪಂಡಿತರ ಊಹೆಯ ವಿಷಯವಾಗಿದ್ದ ವೇದಾಂತದ ಕೆಲವು ಮೂಲಭೂತ ತತ್ತ್ವಗಳು, ಭಕ್ತಿಯ ಭಾವುಕತೆಯ ಜೊತೆಗೆ ಮಿಳಿತಗೊಂಡಾಗ, ಅಪಾರ ಶಕ್ತಿಯನ್ನು ಉತ್ಪನ್ನ ಮಾಡಬಲ್ಲುದೆಂಬುದನ್ನು ಅವರು ಕಂಡುಕೊಂಡರು. ಹೀಗೆ 'ಅನುಷ್ಠಾನ ವೇದಾಂತ' ಎಂದರೆ, ಜ್ಞಾನ–ಭಕ್ತಿ–ಕರ್ಮಗಳ ಸಂಯೋಗವೇ ಆಗಿದೆ. ಇದರ ಪ್ರಕ್ರಿಯೆಯ ಮಾರ್ಗದರ್ಶಕ ನಿಯಮಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಇದರಲ್ಲಿ ಮೊದಲನೆಯ ನಿಯಮವೆಂದರೆ, ದಿವ್ಯತೆಯ ಅಂಶವನ್ನು ಮೊದಲು ತನ್ನಲ್ಲಿ ಮೂಡಿಸಿಕೊಂಡರೆ ಮಾತ್ರವೇ ಒಬ್ಬ ವ್ಯಕ್ತಿಯು ಭಗವಂತನ ನೈಜ ಆರಾಧನೆಯನ್ನು ಮಾಡಬಹುದು ಎಂಬುದು. ಈ ಭಾವನೆಯು, **'ದೇವೋ ಭೂತ್ವಾ ದೇವಾನ್ ಅಪ್ಯೇತಿ'** – 'ದೇವನಾಗಿ ಒಬ್ಬ ವ್ಯಕ್ತಿಯು ದೇವತೆಗಳೊಡನೆ ಒಂದಾಗುವನು' ಎಂಬ ಬೃಹದಾರಣ್ಯಕ ಉಪನಿಷತ್ತಿನ ವಾಕ್ಯದಿಂದ ತಿಳಿದುಬರುತ್ತದೆ. ಈ ವಾಕ್ಯ, ಆ ಉಪನಿಷತ್ತಿನಲ್ಲಿ ಆರು ಸಲ ಪುನರುಕ್ತಿಯಾಗಿದೆ. ತೈತ್ತಿರೀಯ ಉಪನಿಷತ್ತು ಐದು ಪ್ರಜ್ಞಾಹಂತಗಳು ಅಥವಾ ಕೋಶಗಳ ಬಗ್ಗೆ ಹೇಳುತ್ತದೆ. ಮಾಂಡೂಕ್ಯ ಉಪನಿಷತ್ತು ಆತ್ಮನ ಮೂರು ಆಯಾಮಗಳ ಬಗ್ಗೆ ತಿಳಿಸುತ್ತದೆ.

ಅನುಷ್ಠಾನ ವೇದಾಂತದ ಮೊದಲನೆಯ ನಿಯಮ ತಿಳಿಸುವುದೇನೆಂದರೆ, ಒಬ್ಬನು ಪ್ರಜ್ಞೆಯ ಉನ್ನತ ಹಂತಗಳನ್ನು ಅಥವಾ ಆತ್ಮಚೈತನ್ಯದ ಉನ್ನತ ಆಯಾಮಗಳನ್ನು ಏರಿದಾಗ ಮಾತ್ರವೇ ಭಗವಂತನು ಅವನಿಗೆ ನೈಜಾನುಭೂತಿಯಾಗಿ ಗೋಚರ ವಾಗುವನು ಎಂಬುದು. ಸ್ವಾಮಿ ವಿವೇಕಾನಂದರು ಧರ್ಮವನ್ನು, **"ಚಿರಂತನ ಜೀವಾತ್ಮ ಮತ್ತು ಚಿರಂತನ ಪರಮಾತ್ಮರ ನಡುವಣ ಚಿರಂತನ ಸಂಬಂಧ"** ಎಂದು ವ್ಯಾಖ್ಯಾನ ಮಾಡುವಾಗ, ಅವರು ಅಂದುಕೊಂಡದ್ದು, ಪ್ರೇಮವೆಂಬುದು ಇಬ್ಬರು ಸಮಾನರಲ್ಲಿ ಮಾತ್ರವೇ ಇರಲು ಸಾಧ್ಯ ಎಂದೇ. ಶ್ರೀರಾಮಾನುಜರು ಗುರುತುಮಾಡಿ ತೋರಿಸಿದ ಹಾಗೆ, ಒಬ್ಬ ವ್ಯಕ್ತಿಯು ಕರ್ಮ ಮತ್ತು ಜ್ಞಾನಯೋಗಗಳ ಅನುಷ್ಠಾನದಿಂದ ಗಳಿಸಿಕೊಂಡ 'ಆತ್ಮಾವಲೋಕನ' ಅಥವಾ ತನ್ನ ನೈಜಾತ್ಮನ ಅನುಭವದಿಂದಲೇ, ಭಕ್ತಿಯೋಗದ ಸಾಧನೆಯನ್ನು ಕೈಗೊಳ್ಳಲು ಅರ್ಹನಾಗುತ್ತಾನೆ. ಈ ಭಾವನೆಯು ಸ್ವಾಮಿ ವಿವೇಕಾನಂದರ ಚಿಂತನೆಯ ಅಡಿಪಾಯವಾಗಿದೆ. ಜೀವಿಯಲ್ಲಿ ದಿವ್ಯಾತ್ಮವು ಸುಪ್ತವಾಗಿರುವುದು, ನಿರ್ಭಯತೆ, ಸ್ವಾತಂತ್ರ್ಯ ಇವೆಲ್ಲವನ್ನೂ ಈ ನಿಯಮದಲ್ಲಿ ಕಾಣಬಹುದು. ಸ್ವಾಮೀಜಿ ಹೀಗೆ ಹೇಳುತ್ತಾರೆ, **"ಭಗವಂತನು ಚೈತನ್ಯ ಸ್ವರೂಪನು, ಆದ್ದರಿಂದ ಅವನು ಅನಂತನು; ಮಾನವನು ಚೈತನ್ಯಸ್ವರೂಪನು, ಹೀಗಾಗಿ ಅವನು ಕೂಡ ಅನಂತನು. ಅನಂತವೊಂದೇ ಅನಂತವನ್ನು ಆರಾಧಿಸಬಲ್ಲುದು."** ಇನ್ನೊಂದು ಸಂದರ್ಭದಲ್ಲಿ ಅವರು ಹೀಗೆ ಹೇಳುತ್ತಾರೆ: **"ಮೊದಲು ನಾವೆಲ್ಲರೂ ದೇವರುಗಳಾಗೋಣ. ಅನಂತರ ಇತರರೂ ದೇವರುಗಳಾಗುವಂತೆ ಸಹಾಯ ಮಾಡೋಣ." "ನೀನಾಗು ಮತ್ತು (ಬೇರೆಯವರನ್ನೂ ಅ ರೀತಿ) ನಿರ್ಮಾಣ ಮಾಡು. ಇದೇ ನಮ್ಮ ಧ್ಯೇಯವಾಗಲಿ."** ಮತ್ತೆ ಅವರು ಹೀಗೂ ಹೇಳುತ್ತಾರೆ: **"ಭಗವಂತನು ಮಾನವನಾಗಿದ್ದಾನೆ; ಮಾನವನೇ ಮತ್ತೆ ಭಗವಂತನಾಗುವನು."**

*(ಮುಂದುವರಿಯುವುದು)*

ಧಾರಾವಾಹಿ

# ಸ್ವಾಮಿ ವಿವೇಕಾನಂದರ ಮಾತೆಯರು

**ಸ್ವರ್ಣಗೌರಿ**

*(ಹಿಂದಿನ ಸಂಚಿಕೆಯಿಂದ)*

### ಭಗಿನಿ ನಿವೇದಿತಾ

ಲಂಡನ್ ನಗರದಲ್ಲಿ ತತ್ತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಮುಂತಾದವುಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುತ್ತಿದ್ದ ಮಿಸ್ ಮಾರ್ಗರೆಟ್ ನೊಬೆಲ್ ಎಂಬಾಕೆಗೆ ಆಧ್ಯಾತ್ಮಿಕ ಅತೃಪ್ತಿ ಆರಂಭವಾಯಿತು. ೧೮೯೫, ಸೆಪ್ಟಂಬರ್ ೧೦ ರಂದು ಸ್ವಾಮೀಜಿ ಲಂಡನ್ ನಗರವನ್ನು ಪ್ರವೇಶಿಸಿದರು. ಲೇಡಿ ಮಾರ್ಗ್‌ಸನ್ ಎಂಬುವವಳ ಆಮಂತ್ರಣದ ಮೇರೆಗೆ ಸ್ವಾಮೀಜಿಯ ಭಾಷಣ ಕೇಳಲು ಹೋದ ಮಾರ್ಗರೆಟ್ ಮುಂದೆ ಜೊಸೆಫಿನ್ ಮ್ಯಾಕ್ ಲೌಡಳಿಗೆ ಹೀಗೆಂದು ಬರೆಯುತ್ತಾಳೆ: “ಆ ಸಮಯದಲ್ಲಿ ಸ್ವಾಮೀಜಿ ಲಂಡನ್ನಿಗೆ ಬರದೆ ಇದ್ದಿದ್ದರೆ ಏನಾಗುತ್ತಿತ್ತೆಂಬುದನ್ನು ಯೋಚಿಸಿ ನೋಡು; ನನ್ನ ಜೀವನ ನಿರರ್ಥಕವಾಗುತ್ತಿತ್ತು. ಒಂದು ಸುಮುಹೂರ್ತವನ್ನು ನಾನು ನಿರೀಕ್ಷಿಸುತ್ತಿರುವುದಾಗಿ ನನಗೆ ಯಾವಾಗಲೂ ಅನ್ನಿಸುತ್ತಿತ್ತು. ಯಾವಾಗಲೂ ಹೇಳುತ್ತಿದ್ದೆ, ಆಹ್ವಾನ ಬರುವುದೆಂದು. ಆ ಆಹ್ವಾನ ಕೊನೆಗೂ ಬಂದಿತು.”

ಸ್ವಾಮಿ ವಿವೇಕಾನಂದರು ಆಕೆಯನ್ನು ಸಾಧನೆಯ ಗರಡಿಯಲ್ಲಿ ತರಬೇತು ಮಾಡಿ, ಪರಿಶುದ್ಧಳನ್ನಾಗಿ ಮಾಡಿ ಭರತಖಂಡದ ಉದ್ಧಾರಕ್ಕೆ ನಿವೇದಿಸಿದರು. ಅವಳಿಗೆ ಬೇಲೂರು ಮಠದಲ್ಲಿ ಬ್ರಹ್ಮಚರ್ಯ ದೀಕ್ಷೆಯನ್ನು ಕೂಡ ನೀಡಿದರು. ಮಾರ್ಗರೆಟ್ ಅಂದಿನಿಂದ ನಿವೇದಿತೆಯಾದಳು. ಸ್ವಾಮೀಜಿ ಅವಳ ಬಗ್ಗೆ ಹೀಗೆನ್ನುತ್ತಾರೆ: “ಇಂಗ್ಲೆಂಡಿನಲ್ಲಿ ನಾನು ಮಾಡಿದ ಕೆಲಸಕ್ಕೆ ದೊರೆತ ಶ್ರೇಷ್ಠತಮ ಪುಷ್ಪವೇ ನಿವೇದಿತಾ.” ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಒಂದು ಪತ್ರದಲ್ಲಿ ಸ್ವಾಮೀಜಿ, “ಮಿಸ್ ನೊಬೆಲ್ ನಿಜ ವಾಗಿಯೂ ನಮಗೆ ದೊರೆತ ಒಂದು ಅಮೂಲ್ಯ ಆಸ್ತಿ” ಎಂದಿದ್ದಾರೆ. ನಿವೇದಿತಾ ಇಲ್ಲದಿದ್ದರೆ ಸ್ವಾಮೀಜಿಯವರ ಕೆಲವು ಭವ್ಯ ಆಲೋಚನೆಗಳು ಜಗತ್ತಿಗೆ ದೊರಕುತ್ತಲೇ ಇರಲಿಲ್ಲ.

“ಸ್ವಾಮೀಜಿ,ತಮ್ಮ ದೇಶದ ಜನರ ಮೇಲೆ ಇದ್ದ ಪ್ರೀತಿಗೆ ದಾಸ ಳಾಗಲು ನಾನು ಇಚ್ಛಿಸಿದೆ. ಆದರೆ ನಾನು ಸೋತದ್ದು ಅವರ ಶೀಲಕ್ಕೆ. ನಾನಾದರೋ ಅವರ ಆಧ್ಯಾತ್ಮಿಕಪುತ್ರಿಯಾದೆ. ಇದೊಂದು ಅತ್ಯಾನಂದಕರವಾದ ಸಂಬಂಧವಾಗಿ ಪರಿಣಮಿಸಿತು.” ಎಂದು ನಿವೇದಿತಾ ಸ್ವಾಮಿ ವಿವೇಕಾನಂದರ ಬಗ್ಗೆ ಬರೆಯುತ್ತಾಳೆ.

೧೮೯೭ ರ ಏಪ್ರಿಲ್ ೬ ಮತ್ತು ೨೪ ರ ದಿನಾಂಕಗಳಲ್ಲಿ ಬರೆದ ಪತ್ರಗಳಲ್ಲಿ ಸ್ವಾಮೀಜಿ, “ನಿನ್ನಂತಹ ಅನೇಕ ಮಹಿಳೆಯರು ಭಾರತದಲ್ಲಿ ಜನಿಸಲಿ ಮತ್ತು ದೇಶದ ಉನ್ನತಿಗಾಗಿ ತಮ್ಮ ಜೀವನವನ್ನು ಅರ್ಪಿಸಿಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ” ಎನ್ನುತ್ತಾರೆ.



೧೮೯೭, ಜುಲೈ ೨೯ ರ ಪತ್ರದಲ್ಲಿ, “ನಾನು ನಿನಗೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ, ನೀನು ಭಾರತಕ್ಕಾಗಿ ಕೆಲಸ ಮಾಡಿದರೂ ಸರಿ, ಮಾಡದೇ ಇದ್ದರೂ ಸರಿ, ನೀನು ವೇದಾಂತವನ್ನು ತಿರಸ್ಕರಿಸಿದರೂ ಸರಿ, ಅದರಲ್ಲಿಯೆ ಉಳಿದರೂ ಸರಿ. ನಾನು ಮಾತ್ರ ಸಾಯುವವರೆಗೂ ನಿನ್ನ ಹಿಂದೆ ಇರುತ್ತೇನೆ. ಮನುಷ್ಯನ ಮಾತು ಮತ್ತು ಆನೆಯ ಕೊಂಬು ಹೊರಗೆ ಬರುವವೇ ಹೊರತು ಮತ್ತೆ ಒಳಗೆ ಹೋಗುವುದಿಲ್ಲ” ಎಂದು ಸ್ವಾಮೀಜಿ ಬರೆಯುತ್ತಾರೆ.

ನೆವಿನ್ಸನ್ ಎಂಬ ಪತ್ರಕರ್ತ ಹೀಗೆ ಬರೆಯುತ್ತಾರೆ: **“ದಿವ್ಯ ಭಾರತಮಾತೆಯ ಪ್ರೇಮದಾರಾಧನೆಗೆಂದು ಬಹುದೂರದಿಂದ ಅತಿ ಪ್ರಯಾಸದಿಂದ ಹುಡುಕಿ ತಂದ ಸುಗಂಧ ಕುಸುಮವೇ ನಿವೇದಿತಾ... ಆಕೆಯ ಹೆಸರೇ ಸೂಚಿಸುವಂತೆ ಅವಳು ತನ್ನದೆಲ್ಲವನ್ನೂ ಭಾರತಕ್ಕಾಗಿ ಅರ್ಪಿಸಿದ ಮಹಾನ್ ಚೇತನ.”**

### ಮಿಸೆಸ್ ಸೇವಿಯರ್

ವಿವೇಕಾನಂದರು ಎರಡನೇ ಬಾರಿ ಇಂಗ್ಲೆಂಡಿಗೆ ಹೋದಾಗ ಲಂಡನ್‌ನಲ್ಲಿ ಸೇವಿಯರ್ ದಂಪತಿಗಳನ್ನು ಸಂದರ್ಶಿಸಿದರು. ಧರ್ಮಪಿಪಾಸುಗಳಾಗಿದ್ದ ದಂಪತಿಗಳಿಬ್ಬರೂ ತೀವ್ರವಾದ ಸತ್ಯಶೋಧನೆಯಲ್ಲಿ ಮುಳುಗಿದ್ದರು. ಅನೇಕ ಮತಧರ್ಮಗಳನ್ನು ಅನುಸರಿಸಿದರೂ ಅವರ ಆಧ್ಯಾತ್ಮಿಕ ದಾಹ ಇಂಗಿರಲಿಲ್ಲ. ಸ್ನೇಹಿತರೊಬ್ಬರಿಂದ ಸ್ವಾಮಿ ವಿವೇಕಾನಂದರ ಬಗ್ಗೆ ತಿಳಿದು ಅವರ ಮಾತುಗಳನ್ನು ಕೇಳಿದ ತಕ್ಷಣ, “ಆಹಾ! ನಾವು ಇಡೀ ಜನ್ಮ ವ್ಯರ್ಥವಾಗಿ ಯಾವುದಕ್ಕಾಗಿ ಅಲೆಯುತ್ತಿದ್ದೆವೋ ಅದು ಇಲ್ಲಿದೆ.